ದಿನಾಂಕಃ 04/07/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಟಿ.ಎಸ್.ಕೆ. ಆರೋಪಿಗಳ ಪರ ವಕೀಲರಿಂದ**

ದಿ. 16.01.2019 ರಂದು ನಾನು ಠಾಣಾ ಡೇ ರಿಸರ್ವ್ ಕರ್ತವ್ಯದಲ್ಲಿದ್ದೆ. ಆ ನನಗೆ ಸೆಂಟ್ರಿಂಗ್ ಕರ್ತವ್ಯವನ್ನು ನೇಮಕ ಮಾಡಿದ್ದರು. ಡೇ ರಿಸರ್ವ್ ಕರ್ತವ್ಯದಲ್ಲಿದ್ದರಿಂದ ನಾನು ಡೈರಿಯಲ್ಲಿ ಠಾಣೆಗೆ ಯಾರು ಬಂದಿರುತ್ತಾರೆಂದು ನಮೂದು ಮಾಡಿಕೊಂಡಿರುವುದಿಲ್ಲ. ಡೇ ರಿಸರ್ವ್ ಕರ್ತವ್ಯದಲ್ಲಿದ್ದಾಗ ಆರೋಪಿ ಬೆಂಗಾವಲಿಗೆ ನೇಮಕ ಮಾಡುತ್ತಾರೆ ಮತ್ತು ಎಲ್ಲಿ ಅವಶ್ಯಕತೆ ಇರುತ್ತದೆಯೋ ಅಲ್ಲಿಗೆ ಕಳುಹಿಸಿರುತ್ತಾರೆ. ನನಗೆ ಈ ಪ್ರಕರಣದಲ್ಲಿ ಬೆಳಿಗ್ಗೆ 10-00 ಮದ್ಯಾಹ್ನ 1-30 ಗಂಟೆಯವರೆಗೂ ಆರೋಪಿಯ ಬೆಂಗಾವಲಿಗೆ ನೇಮಕ ಮಾಡಿದ್ದರು ಆ ದಿನ ಠಾಣೆಯಲ್ಲಿ 6 ಜನ ಆರೋಪಿತರು ಇದ್ದರು. ಸದರಿ ಆರೋಪಿತರು ಯಾವಾಗ ದಸ್ತಗಿರಿಯಾಗಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ ಮತ್ತು ಆರೋಪಿತರು ಎಷ್ಟು ಗಂಟೆಗೆ ಠಾಣೆಗೆ ಬಂದಿರುತ್ತಾರೆಂದು ನನಗೆ ಮಾಹಿತಿ ಇಲ್ಲ. ಸದರಿ ಆರೋಪಿತರನ್ನು ನ್ಯಾಯಾಧೀಶರ ಮುಂದೆ ಹಾಜರಪಡಿಸಿರುತ್ತಾರೋ ಇಲ್ಲವೂ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

ವೃತ್ತ ನಿರೀಕ್ಷಕರಾದ ನಧಾಪ್ ರವರು ಈ ಪ್ರಕರಣದಲ್ಲಿ ಸಾಕ್ಷಿಯಾಗಬೇಕೆಂದು ನೋಟೀಸು ಕೊಟ್ಟಿದ್ದರು. ಸದರಿ ನೋಟೀಸನ್ನು ಪಂಚನಾಮೆಗೆ ಬಂದಾಗ ವಾಪಸ್ಸು ಕೊಟ್ಟಿರುತ್ತೇನೆ. ಈ ಪ್ರಕರಣದಲ್ಲಿ ನರಸಿಂಹಮೂರ್ತಿ ಗ್ರಾಮ ಲೆಕ್ಕಾಧಿಕಾರಿ ಮತ್ತು ನಕುಲ್ ದ್ವಿತಿಯ ದರ್ಜೆ ಸಹಾಯಕರನ್ನು ಪಂಚರಾಗಿ ಕರೆಸಿದ್ದರು. ಅವರಿಬ್ಬರೇ ಪಂಚ ಸಾಕ್ಷಿದಾರರಾಗಿದ್ದರು ಬೇರೆ ಯಾರು ಪಂಚಸಾಕ್ಷಿದಾರರಾಗಿರಲಿಲ್ಲ. ಪಂಚನಾಮೆ ಕಾಲಕ್ಕೆ ತನಿಖಾಧಿಕಾರಿಯ ಜೊತೆ ನಾವು 6-7 ಜನ ಪೊಲೀಸ್ ಸಿಬ್ಬಂದಿಗಳು ಇದ್ದೇವು. ನನ್ನನ್ನು ಸೇರಿ 4 ಜನ ಪೊಲೀಸರನ್ನು ಆರೋಪಿತರ ಬೆಂಗಾವಲಿಗೆ ನೇಮಕ ಮಾಡಿದ್ದರು. ಆರೋಪಿತರನ್ನು ನಾವು ಪೊಲೀಸ್ ಠಾಣೆಯಿಂದ ಪೋಲೀಸ್ ಠಾಣೆಯ ಆವರಣಕ್ಕೆ ಕರದುಕೊಂಡು ಹೋಗಿದ್ದೇವು, ಆವರಣದಲ್ಲಿ ಕರೆದುಕೊಂಡು ಹೋದಾಗ ಸಮಯ 12-30 ಗಂಟೆ ಆಗಿತ್ತು. ತನಿಖಾಧಿಕಾರಿ ಆರೋಪಿತರಿಗೆ ಇಂತಹ ಜಾಗಕ್ಕೆ ಕರೆದುಕೊಂಡು ಹೋಗುತ್ತೇನೆಂದು ಲಿಖಿತವಾಗಿ ಆರೋಪಿತರಿಗೆ ತಿಳಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

ಕ್ವಾಲೀಸ್ ಮತ್ತು ಸ್ವಿಫ್ಟ್ ಡಿಸೈನರ್ ವಾಹನಗಳನ್ನು ಯಾವ ಜಾಗದಿಂದ ಯಾವ ಸಮಯಕ್ಕೆ ಠಾಣೆಗೆ ತಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಆರೋಪಿತರು ಕಾರಿನ ಡ್ಯಾಶ್ ಬೋರ್ಡ್ ನಿಂದ ಯಾವುದೇ ವಸ್ತುಗಳನ್ನು ತೆಗೆದು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಜಟ್ಟಿಅಗ್ರಹಾರದ ಬಳಿ ಇರುವ ಎಂ.ಎಸ್.ಜೆ. ಕ್ರಷರ್ ಹತ್ತಿರ ನಾನು, ತನಿಖಾಧಿಕಾರಿ ಜೊತೆ ಹೋಗಿದ್ದು 4-5 ಜನ ಪೊಲೀಸರು ಹೋಗಿರುತ್ತೇವೆ. ಪಂಚನಾಮೆಯನ್ನು ನಾನು ಜೀಪಿನ ಬಂಬಪ್ ಮೇಲೆ ಲ್ಯಾಪ್ ಟಾಪ್ ಇಟ್ಟು ಟೈಪ್ ಮಾಡಿರುತ್ತೇನೆ. ಜೀಪನ್ನು ರಸ್ತೆಯಲ್ಲಿ ನಿಲ್ಲಿಸಿಕೊಂಡಿದ್ದೇವು ಎನ್ನುವುದು ನಿಜ. ಜೀಪಿನ ಬ್ಯಾನೆಟ್ ಮೇಲೆ ಲ್ಯಾಪ್‌ಟಾಪ್ ಇಟ್ಟುಕೊಂಡಿದ್ದೆ ತನಿಖಾಧಿಕಾರಿ ಅಲ್ಲಿಗೆ ಬಂದು ಉಕ್ತಲೇಖನದಂತೆ ಹೇಳಿದ ಹಾಗೆ ನಾನು ಟೈಪ್ ಮಾಡಿರುತ್ತೇನೆ. ಅಮಾನತ್ತು ಮಾಡಿಕೊಳ್ಳುವ ಪ್ರಕ್ರಿಯೇ ಸಮಯದಲ್ಲಿ ತನಿಖಾಧಿಕಾರಿ ಹೇಳುತ್ತಿದ್ದ ಹಾಗೆ ನಾನು ಟೈಪ್ ಮಾಡಿರುತ್ತೇನೆ, ಸದರಿ ದಿನಾಂಕ 16.01.2019. ಕೃತ್ಯ ನಡೆದ ಸ್ಥಳದಿಂದ ಜೀಪು ನಿಲ್ಲಿಸಿದ ಜಾಗಕ್ಕೆ ಸುಮಾರು 20 ರಿಂದ 30 ಅಡಿ ಅಂತರ ಇತ್ತು. ರಸ್ತೆಯ ಎರಡು ಬದಿಗೆ ಉಳುಮೆ ಮಾಡುವಂತಹ ವ್ಯವಸಾಯದ ಜಮೀನು ಎಂದರೆ ನಿಜ. ಸದರಿ ಜಾಗ ಜನ ನಿಬಿಡ ಪ್ರದೇಶ ಎಂದರೆ ಸರಿಯಲ್ಲ.

ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಜೀಪಿನ ಬ್ಯಾನೆಟ್ ಮೇಲೆ ಲ್ಯಾಪ್ ಟಾಪ್ ಇಟ್ಟುಕೊಂಡು ಪಂಚನಾಮೆ ಟೈಪ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಆದೇಶಕ್ಕೆ ಬದ್ಧವಾಗಿ ಕೆಲಸ ಮಾಡುತ್ತೇನೆ ಎನ್ನುವುದು ನಿಜ. ನನ್ನ ಮೇಲಾಧಿಕಾರಿಯ ಆದೇಶದ ಮೇರೆಗೆ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ ಎನ್ನುವುದು ನಿಜ. ಪಂಚನಾಮೆಯಲ್ಲಿ ಹೇಳಿದ ಯಾವುದೇ ವಿಚಾರಗಳು ನಡೆದಿರುವುದಿಲ್ಲ, ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ-41 ಮತ್ತು ನಿಪಿ-42 ಪಂಚನಾಮೆ ಕಾಲಕ್ಕೆ ನಾನು ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ.

ಆರೋಪಿತರು ಪತ್ತೆಗಾಗಿ ಹೋಬೇಕೆಂದು ನನಗೆ ಆದೇಶವನ್ನು ಲಿಖಿತವಾಗಿ ಕೊಟ್ಟಿದ್ದಾರೋ ಇಲ್ಲವೂ ನನಗೆ ನೆನಪಿಲ್ಲ. ಪಿ.ಎಸ್.ಐ ಮಂಜುನಾಥ ರವರಿಗೆ ಸಿ.ಪಿ.ಐ ರವರು ಆರೋಪಿತರ ಪತ್ತೆಗಾಗಿ ಸೂಚಿಸಿರುತ್ತಾರೆಂದು ಪಿ.ಎಸ್.ಐ ರವರು ನನಗೆ ಹೇಳಿತರುತ್ತಾರೆ. ದಿ.17.01.2020 ರಂದು ಬೆಳಗಿನಜಾವ 5-00 ರಿಂದ 5-30 ಗಂಟೆಗೆ

ಹೋಗಿರುತ್ತೇವೆ. ಬೆಳಿಗ್ಗೆ 5-30 ಗಂಟೆಗೆ ಠಾಣೆಯಿಂದಲೇ ಎಲ್ಲರೂ ಸೇರಿ ಹೊರಟಿರುತ್ತೇವೆ. ತುಮಕೂರಿನಿಂದ ಅಣ್ಣಯ್ಯನಪಾಳ್ಯಕ್ಕೆ ಹೋಗಿರುತ್ತೇವೆ. ಆರೋಪಿತರ ಬಗ್ಗೆ ಪಿ.ಎಸ್.ಐ ರವರಿಗೆ ಮಾಹಿತಿ ಬಂದಿರುತ್ತದೆ ಅದರಂತೆ ನಾವು ನೇರವಾಗಿ ಕೇಸರಮಡು ಅಣ್ಣಯ್ಯಪಾಳ್ಯದ ಲಕ್ಷ್ಮೀಕಾಂತ ರವರ ತೋಟದ ಜಮಿನಿಗೆ ಹೋಗಿರುತ್ತೇವೆ. ಆರೋಪಿತರ ಚಹರೆ ಬಗ್ಗೆ ನನಗೆ ಯಾವುದೇ ಮಾಹಿತಿ  ಇರಲಿಲ್ಲ ಆದರೆ ಪಿ.ಎಸ್.ಐ ರವರಿಗೆ ಮತ್ತು ಇತರರಲ್ಲಿ ಮಾಹಿತಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿತರ ಚಹರೆ ಮತ್ತು ಗುರುತಿನ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಅವನ್ನು ವಶಕ್ಕೆ ಪಡದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ವಶಕ್ಕೆ ಪಡೆದುಕೊಳ್ಳುವ ಸಮಯದಲ್ಲಿ ಅವರ ಗುರುತಿನ ಬಗ್ಗೆ ಪಂಚನಾಮೆ ಮಾಡಿರುವುದಿಲ್ಲ.

ಆ ದಿನ ನಾನು ಪಿ.ಎಸ್.ಐ ರವರ ಜೊತ ಆರೋಪಿತರ ಪತ್ತೆಗಾಗಿ ಹೋಗಿರುವುದಿಲ್ಲ ಲಕ್ಷ್ಮೀಕಾಂತಯ್ಯ ರವರ ತೋಟದಲ್ಲಿ ಆರೋಪಿತರನ್ನು ವಶಕ್ಕೆ ಪಡೆದುಕೊಂಡು ಬಂದಿರು ವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಇಲ್ಲ.

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಒ ತಿ ಹೇ ಸ ಇದೆ.

4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು-ಮಧುಗಿರಿ.